ಬರಬೇಕೆಂದು ಲೆಕ್ಕ ಕೊಟ್ಟಿದ್ದಾರೆ. ಚೀಫ್ ಸೆಕ್ರೆಟರಿ ಅದನ್ನು ಲೆಕ್ಕಕ್ಕೆ ತೆಗೆದುಕೊಂಡರೂ ಕೂಡ 75 ಸಾವಿರ ರೂಪಾಯಿಗಳನ್ನು ಅವರ ಕಡೆಯಿಂದ ಪಡೆಯಬೇಕೆಂದು ತೀರ್ಮಾನಕ್ಕೆ ಬಂದಿದ್ದಾರೆ. ರಿಕವರಿ ಪ್ರೊಸೀಡಿಂಗ್ ಮಾಡಿ, ಒಂದು ತಿಂಗಳಲ್ಲಿ ವಸೂಲಿ ಮಾಡುತ್ತೇವೆಂದು ಬರೆದು ಕಳುಹಿಸಿದ್ದಾರೆ. ಇದರ ಮಧ್ಯೆ ಸ್ಟೇ ಆರ್ಡರ್ ಬಂದರೆ ಅದು ಬೇರೆ ವಿಷಯ. ಕೋರ್ಟಿನಿಂದ ಸ್ಟೇ ಆರ್ಡರ್ ಬಂದಿದ್ದರೆ ಆ ಹಣವನ್ನು ಒಂದು ತಿಂಗಳಲ್ಲಿ ರಿಕವರಿ ಮಾಡುತ್ತೇವೆ ಎಂದು ನಮಗೆ ಪತ್ರ ಬರೆದಿದ್ದಾರೆ.

ಶ್ರೀ ಎ. ವಿ. ಉಮಾಪತಿ : ಮಾನ್ಯ ಅಧ್ಯಕ್ಷರೇ, ಎಕ್ಸಸ್ ಅಮೌಂಟ್ 1977ನೇ ಆ್ಯಕ್ಟ್ ಪ್ರಕಾರ ಅವರಿಗೆ 300 ರೂಪಾಯಿಗಳು ಕೊಟ್ಟಿರತಕ್ಕದ್ದು ಎಂದು ತಿಳಿಸಿದ್ದಾರೆ. ಆದರೆ ಅವರು ಕೊಟ್ಟಿರುವುದು 3000 ರೂಪಾಯಿಗಳು. ಇದು ತಪ್ಪು ಎಂದು ಗೊತ್ತಿದ್ದರೂ ಅದನ್ನು ಕೊಟ್ಟಿದ್ದಾರೆ. ಮುಂದೆ ಏನಾದರೂ ತೊಡಕು ಉಂಟಾಗಬಹುದೆಂದು 10 ರೂಪಾಯಿಗಳ ಬಾಂಡ್ ಪೇಪರ್ ಮೇಲೆ ಬರೆಸಿಕೊಂಡಿದ್ದಾರೆ. ಯಾರನ್ನೋ ಸಮಾಧಾನ ಪಡಿಸುವುದಕ್ಕೆ ಲಕ್ಷಾಂತರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈಗಾಗಲೇ ಒಂದು ವರ್ಷವಾಯಿತು. ಕೂಡಲೇ ಆದೇಶ ಹೊರಡಿಸಿ ರಿಕವರಿ ಮಾಡಬೇಕು. ಇದಕ್ಕೆ ಸಂಬಂಧಪಟ್ಟಂತೆ ಮುಟ್ಟುಗೋಲು ಆದೇಶ ಹೊರಡಿಸಿದ್ದೀರಾ? ವಸೂಲಾತಿಗೆ ಅಧಿಕಾರಿಗಳನ್ನು ನೇಮಕ ಮಾಡಿದ್ದಾರೆಯೇ? ಯಾವಾಗ ಅವರಿಂದ ವಸೂಲಿ ಮಾಡುತ್ತೀರೆಂದು ಕೇಳುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ 1991ರಲ್ಲಿ ಸಾಕಷ್ಟು ರಿಮೈಂಡರ್ಸ್ ಇಲ್ಲಿಂದ ಹೋಗಿದೆ. ಇದರ ಬಗ್ಗೆ ನೀವು ಪೆಚ್ಚಿನ ಇಂಟರೆಸ್ಟ್ ತೆಗೆದುಕೊಂಡಿರುವಂತೆ ಕಾಣುತ್ತಿದೆ. 8-5-91ರಲ್ಲಿ ಸರ್ಕಾರದವರು ಸಿ.ಎಸ್.ಗೆ ಪತ್ರ ಬರೆದು ಅಮೌಂಟ್ ಏನು ಇದೆ ಅದು ಕಾನೂನು ಬಾಹಿರವಾಗಿದೆ. ಇದನ್ನು ರಿಕವರಿ ಮಾಡಬೇಕೆಂದು ಬರೆದಿದ್ದಾರೆ. ಇಲ್ಲಿಂದ 25-5-91 ಮತ್ತು 15-7-91ರಲ್ಲಿ ಟೆಲೆಕ್ಸ್ ಕಳುಹಿಸಿದ್ದಾರೆ. ಡೆಪ್ಯೂಟಿ ಸೆಕ್ರೆಟರಿಯನ್ನು ರೆಕವರಿ ಆಫೀಸರ್ ಎಂದು ನೇಮಕ ಮಾಡಲಾಗಿದೆ. ಮತ್ತೆ 20-9-91ರಲ್ಲಿ ಕೇಳಿದಾಗ ಚೀಫ್ ಸೆಕ್ರೆಟರಿ ಒಂದು ತಿಂಗಳಲ್ಲಿ ರಿಕವರಿ ಮಾಡುತ್ತೇನೆ ಎಂದು ಹೇಳಿದ್ದರು.

<u>ವಿಷಯ : ಮಂಗಳೂರು ಜನತಾ ಬಜಾರ್ ಆಡಳಿತ ಮಂಡಲಿ ಬಗ್ಗೆ ತನಿಖೆ.</u>

1068

ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ಜನತಾ ಬಜಾರ್ ಆಡಳಿತ ಮಂಡಲಿಯವರು ಸಹಕಾರ ಕಾಯ್ದೆಯನ್ನು ಉಲ್ಲಂಘನೆ ಮಾಡಿ ಅಧಿಕಾರದಲ್ಲಿ ಮುಂದುವರಿದ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಆಡಳಿತ ಮಂಡಲಿಯ ಚುನಾವಣಾ ಕಾಲಕ್ಕೆ ಅನರ್ಹ ಸಹಕಾರ ಸಂಘಗಳಿಗೆ ಮತದಾನದ ಅವಕಾಶ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಕಾನೂನು ಬಾಹಿರವಾದ ಚಟುವಟಿಕೆಗಳಲ್ಲಿ ತೊಡಗಿರುವ ಈ ಸಂಘದ ವ್ಯವಹಾರಗಳ ಕುರಿತು ಸರ್ಕಾರ ಇಲಾಖಾ ತನಿಖೆ ನಡೆಸಲು ಸಿದ್ಧವಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) ಇಲ್ಲ.
ಆ) ಇಲ್ಲ.
ಇ) ಅವಶ್ಯಕತೆ ಕಂಡು ಬಂದರೆ ಸರ್ಕಾರವು ತನಿಖೆಯನ್ನು ನಡೆಸುವುದು.

ಶ್ರೀ ವಿಜಯಕುಮಾರ್ ಶೆಟ್ಟಿ : ಸನ್ಮಾನ್ಯ ಅಧ್ಯಕ್ಷರೇ, ಮಂಗಳೂರು ಜನತಾ ಬಜಾರ್‌ನ ಆಡಳಿತಾವಧಿ ಮೀರಿ 2-3 ವರ್ಷ ಆದರೂ ಮೊನ್ನೆ ತಾನೆ ಚುನಾವಣೆ ನಡೆಸಿದರು. ಚುನಾವಣೆ ನಡೆಸುವಂಥ ಸಂದರ್ಭದಲ್ಲಿ ಯಾವ ಗ್ರೂಪ್‌ಗಳು ಅದಕ್ಕೆ ಬರಬೇಕಾಗಿತ್ತು. ಆ ಗ್ರೂಪನ್ನು ಸೇರಿಸದೆ (ಈ) ಗ್ರೂಪ್ ಸಂಸ್ಥೆಯನ್ನು ಸೇರಿಸಿದ್ದಾರೆ. ಇದು ಆದರಲ್ಲಿ ಬರಬಾರದು ಮತ್ತು ಕೆಲವೊಂದು ನೇಮಕಗಳನ್ನು ಮಾಡುತ್ತಿದ್ದಾರೆ ಬಹಳಷ್ಟು ಅವ್ಯವಹಾರಗಳು ನಡೆಯುತ್ತಾ ಇದೆ. ಅಲ್ಲದೆ ಕಳೆದ ಒಂದು ವರ್ಷದಿಂದ ಅದು ಬಹಳಷ್ಟು ನಷ್ಟದಿಂದ ನಡೆಯುತ್ತಾ ಇದೆ. ಇದನ್ನು ತಕ್ಷಣ ಸೂಪರ್‌ಸೀಡ್ ಮಾಡಿ ಅಡ್ಮಿನಿಸ್ಟ್ರೇಟರನ್ನು ನೇಮಕ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದರಲ್ಲಿ ಏನಾದರೂ ಇರ್-ರೆಗ್ಯುಲಾರಿಟೀಸ್ ಇದ್ದರೆ ಅದರ ಬಗ್ಗೆ ನಾನು ಎನ್‌ಕ್ವೈರಿ ಮಾಡಿಸುತ್ತೇನೆ. ಆದರೆ ಇರ್-ರೆಗ್ಯುಲಾರಿಟೀಸ್ ಇಲ್ಲದೆ ಸುಪರ್‌ಸೀಡ್ ಮಾಡುವುದಕ್ಕೆ ಆಗುವುದಿಲ್ಲ. ಅವರು ಹೇಳಿದ ಪ್ರಕಾರ (ಈ) ಗ್ರೂಪ್‌ಗೆ ಸೇರಿಸಿದ್ದಾರೆ ಎಂದು ಹೇಳಿದ್ದಾರೆ. ಇದರ ಪ್ರಕಾರ ಎಲೆಕ್ಷನ್ ನಡೆಯಬೇಕಾದರೆ ಯಾರು ಯಾರು ಓಟರ್ಸ್ ಇರಬೇಕು ಎನ್ನುವುದರ ಬಗ್ಗೆ ಇದರಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. (ಎ) ಗ್ರೂಪ್‌ನಲ್ಲಿ 4 ಮತ್ತು (ಸಿ) ಗ್ರೂಪ್‌ನಲ್ಲಿ - 3 ಮತ್ತು (ಡಿ) ಗ್ರೂಪ್‌ನಲ್ಲಿ ಒಂದು. ಈ ತರಗತಿ ಮಾರಾಟ ಮತ್ತು ಸಂಸ್ಕರಣ ಸಹಕಾರ ಸಂಘಗಳಲ್ಲಿ -1, ಎಫ್ ಗ್ರೂಪ್‌ನಲ್ಲಿ - 2, ಈ ರೀತಿ ಒಟ್ಟು 11 ಸದಸ್ಯರು ಇದ್ದಾರೆ. ಇದರಲ್ಲಿ ಇಲ್ಲೀಗಲ್ ಎನ್ನುವ ಪ್ರಶ್ನೆ ಬರುವುದಿಲ್ಲ. ಒಂದು ವೇಳೆ ಹಾಗೇನಾದರೂ (ಈ) ಗ್ರೂಪ್‌ನವರು ಅದರಲ್ಲಿ ಸದಸ್ಯರಾಗುವುದಕ್ಕೆ ಅರ್ಹರಿಲ್ಲ, ಅಥವಾ ಇನ್‌ಎಲಿಜಿಬಲ್ ಓಟರ್ಸ್ ಇದ್ದಾರೆಂದು ಹೇಳಿದರೆ ಅದನ್ನು ನಾನು ಎನ್‌ಕ್ವೈರಿ ಮಾಡಿಸಿ ಸೂಕ್ತ ವಾದ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ವಿಜಯಕುಮಾರ್ ಶೆಟ್ಟಿ : (ಈ) ಗ್ರೂಪನ್ನು ಸೇರಿಸಬಾರದು ಎಂದು ಇದೆ. ಮೊದಲನೇ ಚುನಾವಣೆಯಲ್ಲಿ ಈ ಗ್ರೂಪನ್ನು ಸೇರಿಸಿರಲಿಲ್ಲ ಮತ್ತು ಆಡಳಿತ ಮಂಡಳಿಯವರೇ ಚುನಾವಣೆಯನ್ನು ನಡೆಸುವುದಕ್ಕೆ ಸ್ಟೇ ತಂದಿದ್ದಾರೆ. ಬಹಳಷ್ಟು ಅವ್ಯವಹಾರಗಳು ನಡೆಯುತ್ತಿದೆ. ಅಡ್ಮಿನಿಸ್ಟ್ರೇಟರ್ ಇದನ್ನು ವಹಿಸಿಕೊಳ್ಳಬೇಕು ಎಂದು ನಾನು ತಕ್ಷಣ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವ್ಯವಹಾರ ನಡೆದಿದ್ದರೆ, ಈಗಾಗಲೇ ಹೇಳಿದ್ದೇನೆ ಎನ್‌ಕ್ವೈರಿ ಮಾಡಿಸುತ್ತೇನೆಂದು. ಎನ್‌ಕ್ವೈರಿಯಲ್ಲಿ ತಪ್ಪಿತಸ್ಥರೆಂದು ಕಂಡು ಬಂದರೆ ಖಂಡಿತವಾಗಿ ಸೂಪರ್‌ಸೀಡ್ ಮಾಡಿಸುತ್ತೇನೆ.

ಶ್ರೀ ಜಿ. ಎಸ್. ಆಚಾರ್ : ಸನ್ಮಾನ್ಯ ಅಧ್ಯಕ್ಷರೇ, ಈ ಸಂಘ ಸಂಪೂರ್ಣವಾಗಿ ನಷ್ಟಕ್ಕೆ ಬಂದಿದೆ. ಚುನಾವಣೆ ಎರಡು ಮೂರು ವರ್ಷಗಳಿಂದ ನಡೆಯಲಿಲ್ಲ. ಚುನಾವಣೆ ಯಾಗಬೇಕೆಂದು ನೋಟಿಫೈ ಆದಾಗ ಕೋರ್ಟಿನಲ್ಲಿ ಸ್ಟೇ ಆಗುತ್ತದೆ. ಸ್ಟೇ ಆಗುವುದು ಏಕೆಂದರೆ, ಕೆಲವು ಸಂಘಗಳಲ್ಲಿನ ಆಡಳಿತ ಮಂಡಳಿಯವರು ಚುನಾವಣೆಯನ್ನು ಪ್ರಕಟಣೆ ಮಾಡುವಾಗ ತಪ್ಪು

ಪ್ರಕಟಣೆ ಮಾಡಿ ಅದಕ್ಕೆ ಸ್ಟೇ ಆರ್ಡರ್ ಸಿಗುವ ಹಾಗೆ ಮಾಡುತ್ತಿದ್ದಾರೆ. ಒಂದು ಸಲ ವಿತಿನ್ 15 ಡೇಸ್ ನೋಟೀಸ್ ಕೊಡದೇ ಸ್ಟೇ ಆಯಿತು. ಓಟರ್ಸ್ ಪಟ್ಟಿ ಸರಿಯಾಗಿ ಮಾಡದೇ ಸ್ಟೇ ಆಯಿತು. ಸನ್ಮಾನ್ಯ ಸಚಿವರು ಓಟರ್ಸ್ ಪಟ್ಟಿ ಬಗ್ಗೆ ಹೇಳಿದರು. ಈ ಓಟರ್ಸ್ ಪಟ್ಟಿಯನ್ನು ಸರ್ಕಾರವೇ ಏಕೆ ಮಾಡಬಾರದು, ಹಿಂದಿನ ಚುನಾವಣೆಯ ಓಟರ್ ಪಟ್ಟಿಯಲ್ಲಿ ಯಾವ ಯಾವ ಗ್ರೂಪ್‌ಗೆ ಸೇರಬೇಕೋ ಅದನ್ನು ಬದಲಾವಣೆ ಮಾಡುತ್ತಾರೆ. ಆ ಬದಲಾವಣೆ ಆಗದೇ ಇರುವ ಹಾಗೆ ನೋಡಿಕೊಳ್ಳಬೇಕು. ಮೊನ್ನೆ ಚುನಾವಣೆ ನಡೆದಿದೆ, ರಿಸಲ್ಟ್ ಪ್ರಕಟಣೆಗೆ ತಡೆಯಾಗಿದೆ. ಹೀಗೆ ಆಗುವುದು ಸರಿಯಲ್ಲ, ಆದ್ದರಿಂದ ಸರಿಯಾದ ಕ್ರಮ ಕೈಗೊಳ್ಳಬೇಕೆಂದು ನಾನು ಸೂಚಿಸುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಈಗಾಗಲೇ ಹೇಳಿದ್ದೇನೆ ಹಾಗೇನಾದರೂ ಇನ್ ಎಲಿಜಿಬಲ್ ಆಗಿ ಓಟರ್ಸ್ ಬಂದಿದ್ದರೆ, ಎಲೆಕ್ಷನ್ ಪ್ರೊಸೀಜರ್‌ನಲ್ಲಿ ತಪ್ಪಾಗಿದ್ದರೆ ಅದನ್ನು ಸಂಪೂರ್ಣವಾಗಿ ಎನ್‌ಕ್ವೈರಿ ಮಾಡಿಸುತ್ತೇನೆ. ಏನಾದರೂ ತಪ್ಪು ಕಂಡು ಬಂದರೆ I will take further action ..... ತಕ್ಷಣ ಸೂಪರ್‌ಸೀಡ್ ಮಾಡುವುದೆಂದರೆ ಅದು ಆಗುವುದಿಲ್ಲ.

<u>ವಿಷಯ : ಉತ್ತರ ಕನ್ನಡ ಜಿಲ್ಲೆಯ ಡಿ.ಸಿ.ಸಿ. ಬ್ಯಾಂಕಿನಲ್ಲಿನ ಷೇರು ಮೊತ್ತ.</u>

1375

ಶ್ರೀ ಆರ್.ಎನ್. ನಾಯಕ್ (ಭಟ್ಕಳ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯ ಡಿ.ಸಿ.ಸಿ. ಬ್ಯಾಂಕಿನಲ್ಲಿ ಸರಕಾರ ಹೊರಡಿಸಿರುವ ತನ್ನ ಪಾಲಿನ ಷೇರು ಮೊತ್ತವೆಷ್ಟು?
ಆ) ಬ್ಯಾಂಕು ಆಡಳಿತ ಸರಕಾರದ ಶೇರನ್ನು ಹಿಂದಕ್ಕೆ ಕೊಡಲು ತೀರ್ಮಾನಿಸಿದೆಯೇ?
ಇ) ತೀರ್ಮಾನಿಸಿದ್ದರೆ ಅದಕ್ಕೆ ಕಾರಣಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) ರೂ. 36.11 ಲಕ್ಷ
ಆ) ಹೌದು.
ಇ) ಸರಕಾರ, ಉತ್ತರ ಕನ್ನಡ ಜಿಲ್ಲೆಯ ಡಿ.ಸಿ.ಸಿ. ಬ್ಯಾಂಕಿಗೆ ಶೇರು ಬಂಡವಾಳ ಮಂಜೂರು ಮಾಡುವಾಗ ವಿಧಿಸಿದ್ದ ಕರಾರುಗಳ ಪ್ರಕಾರ, ಬ್ಯಾಂಕು ಮಂಜೂರಾದ ಶೇರುಗಳನ್ನು ಸರ್ಕಾರಕ್ಕೆ ಹಿಂತಿರುಗಿಸಿರುತ್ತದೆ.

ಶ್ರೀ ಆರ್. ಎಸ್. ನಾಯಕ್ : ಅಧ್ಯಕ್ಷರೇ, ಈ ಉತ್ತರ ನೋಡಿದರೆ ನನಗೆ ಏನೂ ಸಮಾಧಾನ ಆಗಿಲ್ಲ. ನಾನು ಕೇಳಿದ ಉದ್ದೇಶ ಏನು ಎಂದರೆ ಉತ್ತರ ಕನ್ನಡ ಜಿಲ್ಲೆಯ ಡಿ.ಸಿ.ಸಿ. ಬ್ಯಾಂಕ್‌ನಲ್ಲಿ ಸರ್ಕಾರದ ಷೇರ್ ಇದ್ದರೆ ಮಾತ್ರ ಸರ್ಕಾರಕ್ಕೆ ಆ ಬ್ಯಾಂಕ್‌ನ ವ್ಯವಹಾರದ ಮೇಲೆ ಹಿಡಿತ ಇರುತ್ತದೆ. ನೀವು ಷೇರ್‌ಅನ್ನು ಹಿಂದಕ್ಕೆ ಪಡೆದುಕೊಂಡರೆ ಸರ್ಕಾರಕ್ಕೆ ಏನಾದರೂ ಹಿಡಿತ ಇರುತ್ತದೆಯೇ? ಹೇಗೆ? ಅಥವಾ ಇರುವುದಿಲ್ಲವೋ? ಎರಡನೆಯದು ಈ ಹಣವನ್ನು ಏಕೆ ಹಿಂತಿರುಗಿಸಿದ್ದಾರೆಂದರೆ ಕಳೆದ ಸಲ ಸಿರಸಿ ಡಿ.ಸಿ.ಸಿ. ಬ್ಯಾಂಕ್‌ನ ಮ್ಯಾನೇಜಿಂಗ್ ಡೈರೆಕ್ಟರ್ ಸುಮಾರು 20 ವರ್ಷದ ನಂತರ ಒಂದೇ ಸ್ಥಾನದಲ್ಲಿ ಕುಳಿತಿದ್ದಾಗ ಅವರ ಟ್ರಾನ್ಸ್‌ಫರ್ ಆಯಿತು.